ಸದರಿ ಜಮೀನುಗಳನ್ನು ಒಟ್ಟು 84 ಜನರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು.

ಈ 84 ಬಗರ್ ಹುಕುಂ ಸಾಗುವಳಿದಾರರ ಪೈಕಿ, 14 ಜನರಿಗೆ ಸದರಿ ಗ್ರಾಮದ ಸರ್ವೆ ನಂ.22ರ ಪೈಕಿ 1971ರಲ್ಲಿ ಜಮೀನು ಮಂಜೂರಾಗಿದ್ದರೂ, ಸರ್ವೆ ನಂ. 20 ಮತ್ತು 21ರಲ್ಲಿಯೂ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು.

ಆದಾಗ್ಯೂ, ಸದರಿ ಜಮೀನಿನಲ್ಲಿ, ಈ 84 ಜನರ ಪೈಕಿ ಈಗ್ಯೆ ಯಾರೂ ಸ್ವಾಧೀನಾನುಭವದಲ್ಲಿರುವುದಿಲ್ಲ. ಯಾಕೆಂದರೆ ಈ ಜಮೀನಿನಲ್ಲೂ ಸಹಾ ಅರಣ್ಯ ಇಲಾಖೆಯವರು ಗುಂಡಿಗಳನ್ನು ತೆಗೆದು ಸಸಿಗಳನ್ನು ನೆಟ್ಟಿರುತ್ತಾರೆ.

ಶ್ರೀ ಚೌಡರೆಡ್ಡಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಉತ್ತರದಲ್ಲಿ (ಅ) ಸರ್ವೆ ನಂಬರ್ 20,21 ರಲ್ಲಿ 750 ಎಕರೆ 32 ಗುಂಟೆಗಳನ್ನು ಅರಣ್ಯ ಇಲಾಖೆಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಉಳಿಕೆ 190 ಎಕರೆ ಇದೆ ಎಂದು ಒಪ್ಪಿಕೊಂಡಿದ್ದಾರೆ. ಬಹುಶಃ 20 ವರ್ಷಗಳಿಂದ ಅನೇಕ ಬಡ ರೈತರು ಈ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಇವರೇ ಒಪ್ಪಿಕೊಂಡಂತೆ ಈ ಜಮೀನನ್ನು 84 ಜನರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯವರು ಡಿಕ್ಟೇಟರ್ಸ್ ತರಹ ವರ್ತಿಸುತ್ತಿದ್ದಾರೆ. ಇವರುಗಳ ಮೇಲೆ ಅನೇಕ ಕೇಸ್‌ಗಳನ್ನು ಹಾಕುತ್ತಿದ್ದಾರೆ, ಬಹಳ ತೊಂದರೆ ಕೊಡುತ್ತಿದ್ದಾರೆ. ಇದರ ಬಗ್ಗೆ ಪ್ರಾಮಾಣಿಕವಾಗಿ ತಾವು ಎನ್‌ಕ್ವೈರಿ ಮಾಡಿಸಿ, ಸರ್ವೆ ಮಾಡಿಸಿ, ಈಗ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಏನಾದರೂ ಸಹಾಯ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ತಿದ್ದುಪಡಿ ತಂದು ಎಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೋ, ಅದನ್ನು ಸಕ್ರಮಗೊಳಿಸಬೇಕು ಎನ್ನತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಮತ್ತು ಅಪ್ಲಿಕೇಷನ್ಸ್ ಅನ್ನು ಕರೆದಿದ್ದೇವೆ. ಅಪ್ಲಿಕೇಷನ್ಸ್ ಸಲ್ಲಿಸಲು ಕಡೆಯ ತಾರೀಖು ಈ ತಿಂಗಳ 17ನೇ ತಾರೀಖು. ಅದರ ಪ್ರಕಾರ ಇವರೂ ಅಪ್ಲಿಕೇಷನ್ಸ್ ಹಾಕಿದರೆ, ಕಾನೂನು ರೀತ್ಯ ಇವರಿಗೂ ರೆಗ್ಯೂಲರೈಸ್ ಆಗುತ್ತದೆ. ತಾವು ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳುತ್ತಿದ್ದೀರಿ. ನಾನು ಡೆಪ್ಯುಟಿ ಕಮಿಷನರ್‌ರವರನ್ನು ಕಳುಹಿಸಿ ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಅಲೆಮಾರಿ ಜನಾಂಗದವರಿಗೆ ಜಮೀನಿನ ಖಿಮ್ಮತ್ತು ಮನ್ನಾ

2432 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ?

ಆ) ಸದರಿ ಆದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಪೂರ್ಣ ಖಿಮ್ಮತ್ತನ್ನು ಮನ್ನಾ ಮಾಡಲು ಅವಕಾಶವಿದೆಯೇ, ಇಲ್ಲದಿದ್ದಲ್ಲಿ ಕಾರಣವೇನು?

ಇ) ಬಗರ್ ಹುಕುಂ ಜಮೀನು ಖಾಯಂಗೊಳಿಸುವಾಗಿ ಅಲೆಮಾರಿ ಜನಾಂಗದವರಿಗೆ ಪೂರ್ಣ ಖಿಮ್ಮತ್ತನ್ನು ಮನ್ನಾ ಮಾಡಲು ಅವಕಾಶವಿದೆಯೇ? ಇಲ್ಲದಿದ್ದರೆ ಕಾರಣವೇನು?

ಈ) ಅಲೆಮಾರಿ ಜನಾಂಗದವರಿಗೆ ಖಿಮ್ಮತ್ತು ಮನ್ನಾ ಮಾಡಲು ಹಾಗೂ ಪರಿಶಿಷ್ಟರ ಸೌಲಭ್ಯ ವಿಸ್ತರಿಸಲು ಸಂವಿಧಾನದಲ್ಲಿ ಅವಕಾಶವಿಲ್ಲವೇ, ಇದ್ದಲ್ಲಿ ಇವರಿಗೇಕೆ ಆ ಸೌಲಭ್ಯವನ್ನು ವಿಸ್ತರಿಸಬಾರದು?

ಉ) ಇವರು ಖಾಯಂ ನಿವಾಸಿಗಳಲ್ಲವೇ?

ಊ) ಇದಕ್ಕೆ ಸರ್ಕಾರದ ಅಭಿಪ್ರಾಯ ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಋ) ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಸರ್ಕಾರ ಜಮೀನನ್ನು ಖಾಯಂಗೊಳಿಸಲಾಗಿತ್ತಿದೆಯೇ? ಹಾಗಿದ್ದಲ್ಲಿ ಗ್ರಾಮಾಭಿವೃದ್ಧಿ ಮತ್ತು ನಿವೇಶನ ಹಂಚುವ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಯಾವ ವಿಧಾನವನ್ನು ಅನುಸರಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಅವಕಾಶವಿದೆ.

ಇ) ಅಲೆಮಾರಿ ಜನಾಂಗದವರ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿರುವವರಿಗೆ ಕಿಮ್ಮತ್ತು ಪೂರ್ಣ ಮನ್ನಾ ಮಡಲು ಕಾನೂನಿನಲ್ಲಿ ಅವಕಾಶವಿರುತ್ತೆ-ಪರಿಶಿಷ್ಟಜಾತಿ ಪರಿಶಿಷ್ಟಪಂಗಡಗಳ ಪಟ್ಟಿಗೆ ಸೇರದಿರುವ ಇತರೆ ಅಲೆಮಾರಿ ಜನಾಂಗದವರಿಗೆ ಪೂರ್ಣ ಕಿಮ್ಮತ್ತು ಮನ್ನಾ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರದೆ ಇರುವ ಅಲೆಮಾರಿ ಜನಾಂಗದವರಿಗೆ ಕಿಮ್ಮತ್ತು ಮನ್ನಾ ಮಾಡಲು ಅವಕಾಶವಿರುವುದಿಲ್ಲ. ಪರಿಶಿಷ್ಟರಿಗೆ ಲಭಿಸುವ ಸೌಲಭ್ಯ ಇತರ ಅಲಿಮಾರಿ ಜನಾಂಗದವರಿಗೆ ವಿಸ್ತರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಅದ್ದರಿಂದ ಪರಿಶಿಷ್ಟರಿಗೆ ಸಿಗುವ ಸೌಲಭ್ಯವನ್ನು ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರದಿರುವ ಇತರ ಅಲಿಮಾರಿ ಜನಾಂಗದವರಿಗೆ ವಿಸ್ತರಿಸಲು ಬರುವುದಿಲ್ಲ.

ಉ) ಇವರು ಖಾಯಂ ನಿವಾಸಿಗಳಲ್ಲವೆಂದು ತಿಳಿದು ಬರುತ್ತೆ.

ಊ) ಅಲೆಮಾರಿ ಜನಾಂಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರದೆ ಇದ್ದಲ್ಲಿ ಅಂತಹವರಿಗೆ, ಪರಿಶಿಷ್ಟರಿಗೆ ಸಿಗುವ ಸೌಲಭ್ಯಗಳು ಸಿಗುವುದಿಲ್ಲ. ಆದರೂ ಸರ್ಕಾರ ಅಲೆಮಾರಿ ಜನಾಂಗದವರಿಗೆ ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಸೌಲಭ್ಯ ಕಲ್ಪಿಸಲು, ಅವರನ್ನು ಹಿಂದುಳಿದ ವರ್ಗದ 'ಎ' ಸಮೂಹಕ್ಕೆ ಸೇರಿಸಿ ದಿನಾಂಕ 13-10-1986ರಲ್ಲಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯುಎಲ್ 66 ಬಿಸಿಎ 86 ನ್ನು ಹೊರಡಿಸಿದೆ.

ಋ) ಗ್ರಾಮಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಮೀನನ್ನು ಅರ್ಹ ಅನಧಿಕೃತ ಸಾಗುವಳಿದಾರರಿಗೆ ಖಾಯಂಗೊಳಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ಗ್ರಾಮಾಭಿವೃದ್ಧಿಗೆ ಮತ್ತು ನಿವೇಶನ ಹಂಚುವ ಕಾರ್ಯಕ್ರಮಗಳನ್ನು ಜಾರಿಗೊಳಿಸಲು, ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಸೂಕ್ತ ಜಮೀನನ್ನು ಪತ್ತೆ ಹಚ್ಚಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗುವುದು.

ಶ್ರೀ ಎಸ್. ರುದ್ರಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಅಲೆಮಾರಿ ಜನಾಂಗದವರ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿರುವವರಿಗೆ ಕಿಮ್ಮತ್ತು ಪೂರ್ಣ ಮನ್ನಾ ಮಾಡಲು ಕಾನೂನಿನಲ್ಲಿ ಅವಕಾಶವಿರುತ್ತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರದಿರುವ ಇತರೆ ಅಲೆಮಾರಿ ಜನಾಂಗದವರಿಗೆ ಪೂರ್ಣ ಕಿಮ್ಮತ್ತನ್ನು ಮನ್ನಾ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವೆಂದು ಹೇಳಿದ್ದಾರೆ. ಇವರಿಗೂ ಏಕೆ ಪೂರ್ಣ ಕಿಮ್ಮತ್ತು ಮನ್ನಾ ಮಾಡಬಾರದು ಎನ್ನುವುದು ಒಂದು ಪ್ರಶ್ನೆ. ಎರಡನೆದಾಗಿ ಇವರು ಎಲ್ಲಿ ವಾಸಿಸುತ್ತಿದ್ದಾರೆ

ಎಂದು ಕೇಳಿದ್ದಕ್ಕೆ ಇವರು ಖಾಯಂ ನಿವಾಸಿಗಳಲ್ಲವೆಂದು ತಿಳಿದು ಬಂದಿದೆಯೆಂದು ಹೇಳಿದ್ದಾರೆ. ಅವರು ಎಲ್ಲಿ ವಾಸ ಮಾಡುತ್ತಿದ್ದಾರೆ ಎನ್ನುವುದನ್ನು ಹೇಳಬೇಕು. ಮೂರನೆಯದು, ಗ್ರಾಮಕ್ಕೆ ಹೊಂದಿಕೊಂಡಿರುವಂಥ ಸರ್ಕಾರಿ ಜಮೀನನ್ನು ಅರ್ಹ ಅನಧಿಕೃತ ಸಾಗುವಳಿದಾರರಿಗೆ ಖಾಯಂಗೊಳಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದ್ದಾರೆ. ಮುಂದೆ ಬೆಳೆಯುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇಂಥ ಭೂಮಿಯನ್ನು ರಿಸರ್ವೇಷನ್ ಇಟ್ಟುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕೆಲವು ಜಮೀನುಗಳನ್ನು ಸಕ್ರಮಗೊಳಿಸ ಬೇಕು ಎನ್ನತಕ್ಕಂಥ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಆ ರೀತಿಯಾಗಿ ಸಕ್ರಮಗೊಳಿಸಲೇ ಬೇಕಾಗುತ್ತದೆ. ಏಕೆಂದರೆ, ಒಬ್ಬರಿಗೆ ಒಂದು ನೀತಿ, ಇನ್ನೊಬ್ಬರಿಗೆ ಇನ್ನೊಂದು ನೀತಿ ಎಂದು ಮಾಡುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ, ನೊಮ್ಯಾಡಿಕ್ ಟ್ರೈಬ್ಸ್ ಅಂದರೆ ಪರಿಶಿಷ್ಟ ಜಾತಿಯ ಲಿಸ್ಟನಲ್ಲಿ ಯಾವ ಜಾತಿಗಳು ಬರುತ್ತವೆಯೋ, ಅವರಿಗೆ ಸೇಮ್ ಕನ್‌ಸೆಷನ್ ಸಿಗುತ್ತದೆ. ಆದರೆ ಆ ಪಟ್ಟಿಯಲ್ಲಿ ಯಾರು ಬರುವುದಿಲ್ಲವೋ, ಅಂಥವರಿಗೆ ಆ ಕನ್‌ಸೆಷನ್ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ಸಂವಿಧಾನದ ಪ್ರಕಾರ ಒಂದು ಪಟ್ಟಿ ತಯಾರಾಗಿದೆ. ಉಳಿದಂಥವರು ಬ್ಯಾಕ್‌ವರ್ಡ್‌ಕ್ಲಾಸ್ ಲಿಸ್ಟನಲ್ಲಿ ಬರುವುದರಿಂದ, ಕಾನೂನು ರೀತ್ಯ ಬೇರೆ ಯಾವ ಸೌಲಭ್ಯ ಸಿಗಬೇಕೋ ಅಂದರೆ, ಎಜ್ಯುಕೇಷನ್, ಎಕಾನಾಮಿಕ್ ಬೆನಿಫಿಟ್ಸ್ ಅವು ಮಾತ್ರ ಸಿಗುತ್ತದೆಯೇ ಹೊರತಾಗಿ ಅವರನ್ನು ಇದರಲ್ಲಿ ನಾವು ಅಳವಡಿಸಿಕೊಂಡಿಲ್ಲ, ಈ ಸೌಲಭ್ಯ ಅವರಿಗೆ ಸಿಗುವುದಿಲ್ಲ.

ಶ್ರೀ ಹೆಚ್. ವಿಶ್ವನಾಥಯ್ಯ: ಮಾನ್ಯ ಕಂದಾಯ ಮಂತ್ರಿಗಳು, ಅಕ್ರಮ ಸಾಗುವಳಿ ಮಾಡುತ್ತಿರುವಂಥ ಜಮೀನನ್ನು ಸಕ್ರಮಗೊಳಿಸಲು, ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ ಈ ತಿಂಗಳ 17 ಎಂದು ಗೊತ್ತುಮಾಡಿದೆ ಎಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶದ ಜನರು ಅದರಲ್ಲೂ ದಲಿತರು ಅಕ್ರಮ ಸಾಗುವಳಿ ಏನು ಮಾಡುತ್ತಿದ್ದಾರೆ ಅವರಲ್ಲಿ ಅನೇಕರು ಆದಕ್ಕಾಗಿ ಅರ್ಜಿಯನ್ನು ಸಲ್ಲಿಸಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ, 17ನೇ ತಾರೀಖು ಎಂದು ಏನು ಗಡುವನ್ನು ನಿಗದಿಮಾಡಿದ್ದೀರಿ, ಅದನ್ನು ಮುಂದುವರಿಸುವಂಥ ಆಲೋಚನೆ ಸರ್ಕಾರಕ್ಕೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾವು ಗಡುವನ್ನು ಏಕೆ ಹಾಕಿದ್ದೇವೆಂದರೆ, ಟೈಮ್ ಫಿಕ್ಸ್ ಮಾಡದಿದ್ದರೆ, ಯಾರೂ ಅಪ್ಲಿಕೇಷನ್ ಹಾಕುವುದಿಲ್ಲ. ಇದು ಕಂಟಿನ್ಯೂ ಪ್ರೊಸೆಸ್ ಇರುತ್ತದೆ, ಅಲ್ಲದೆ ಟೈಂ ಮುಂದುವರಿಸುತ್ತಾ ಹೋದರೆ ಬಹಳ ಜನ ಆಸಕ್ತಿ ವಹಿಸುವುದಿಲ್ಲ. ಅಟ್‌ಲೀಸ್ಟ್ ಒಂದು ಟೈಂ ಫಿಕ್ಸ್ ಮಾಡಿ, ನಾವು ಡ್ರೈವ್ ತೆಗೆದುಕೊಂಡರೆ ಅರ್ಜಿಗಳನ್ನು ಹಾಕುತ್ತಾರೆ. ಈಗಾಗಲೆ ತಮಗೆ ಗೊತ್ತಿದೆ. ಪೇಪರ್‌ನಲ್ಲಿ ಜಾಹೀರಾತಿನ ಮೂಲಕ ಜನರಿಗೆ ತಿಳುವಳಿಕೆ ಕೊಡುವಂಥ ಪ್ರಯತ್ನ ಮಾಡಿದ್ದೇವೆ. ರೇಡಿಯೋ ಮೂಲಕ ಹೇಳುವಂಥ ಪ್ರಯತ್ನವನ್ನೂ ಮಾಡಿದ್ದೇವೆ. ಡೆಪ್ಯೂಟಿ ಕಮೀಷನರ್ ಹಾಗು ತಹಶೀಲ್ದಾರ್‌ಗಳಿಗೆ ಹ್ಯಾಂಡ್‌ಬಿಲ್ ಮಾಡಿ ಎಲ್ಲಾ ಕಡೆ ಹಂಚಿಸಬೇಕೆಂದು ಸಹ ಹೇಳಿದ್ದೇವೆ. 17ನೇ ತಾರೀಖಿನವರೆಗೆ ನೋಡೋಣ. 17ನೇ ತಾರೀಖಿನವರೆಗೆ ಎಷ್ಟು ಅಪ್ಲಿಕೇಷನ್ಸ ಬರುತ್ತದೆ ಎಂದು ನೋಡಿದ ಮೇಲೆ, ಇನ್ನೂ ಅಪ್ಲಿಕೆಂಟ್ಸ್ ಉಳಿದಿದ್ದರೆ, ಅದರ ಬಗ್ಗೆ ನಾವು ಯೋಚನೆ ಮಾಡೋಣ. ಇಲ್ಲದಿದ್ದರೆ, ನಾವು ಗಡುವನ್ನೇ ಹಾಕದೇ ಹೋದರೆ ಈ ಕೆಲಸ ಹತ್ತಾರು ವರ್ಷ ಹಾಗೆಯೇ ಉಳಿಯುತ್ತದೆ. ಏನಾದರೂ ಮಾಡೋಣ ಎನ್ನುವ ದೃಷ್ಟಿಯಿಂದ ಮಾವು ಮಾಡುತ್ತಿದ್ದೇವೆ.

ಶ್ರೀ ಎ. ರುಕ್ಕಯ್ಯ ಪೂಜಾರಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಭೂಮಿ ಇದೆ. ಆ ಕುಮ್ಕಿ ಭೂಮಿಯಲ್ಲಿ ಅಕ್ರಮ ಸಾಗುವಳಿ ಮಾಡಿರುವುದನ್ನು ಸಕ್ರಮಗೊಳಿಸುವಂಥಾದ್ದನ್ನು ಈ ಕಾನೂನಿನಲ್ಲಿ ಸೇರಿಸುತ್ತೀರಾ? ಏಕೆಂದರೆ, ಸಾವಿರಾರು ಕುಟುಂಬಗಳು ಈ ಕುಮ್ಕಿ ಭೂಮಿಯಲ್ಲಿ ಮನೆ ಕಟ್ಟಿ, ಸಾಗುವಳಿ ಮಾಡಿ ಜೀವನ ನಡೆಸುತ್ತಿದ್ದಾರೆ. ಅಂಥಹ ಭೂಮಿಯನ್ನು ಸಕ್ರಮಗೊಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಬಗ್ಗೆ ನನ್ನ ಹತ್ತಿರ ಡಿಟೇಲ್ಸ್ ಇಲ್ಲ. ಸೌತ್ ಕೆನರಾ ಮತ್ತು ಕೂರ್ಗ್‌ನಲ್ಲಿ ಬೇರೆ ಬೇರೆ ರೀತಿಯ ಜಮೀನಗಳಿವೆ. ಅದಕ್ಕೆ ತಾವು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ನಾನು ಉತ್ತರ ಹೇಳುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷಣೆಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಾತ್ರ ಭೂಮಿ ಕಿಮ್ಮತ್ತನ್ನು ಮನ್ನಾ ಮಾಡಲು ಅವಕಾಶ ಇದೆಯೆಂದು ಹೇಳಿದ್ದಾರೆ. ಇದು ನಾವು ಮಾಡುತ್ತಿರುವ ಕೆಲಸ. ಭೂಮಿ ಇಲ್ಲದೇ ಇರುವಂತಹ ಜನಗಳ ಬಗ್ಗೆ, ಲ್ಯಾಂಡ್‌ಲೆಸ್ ಲೇಬರರ್ಸ್ ಎಂದು ಏನು ಹೇಳುತ್ತೇವೆ ಅವರಿಗೆ ಮಾಡುತ್ತಿರುವ ಕೆಲಸ. ಅವರ ಬಗ್ಗೆ ಇತ್ತೀಚೆಗೆ ನಮಗೆ ಮಾಹಿತಿ ಸಿಕ್ಕಿದ್ದು, ಚಿನ್ನಪ್ಪ ರೆಡ್ಡಿ ವರದಿಯನ್ನು ತಾವು ತೆಗೆದು ನೋಡಿದರೆ, ಗೊತ್ತಾಗುತ್ತದೆ. ಅಥವಾ 51ನೇ ಸೆನ್ಸಸ್ ಫಿಗರ್ಸ್‌ನಿಂದ 91ನೇ ಸೆನ್ಸಸ್‌ವರೆಗೆ ಸ್ವಲ್ಪ ನೋಡಿದರೆ, there ar e more touchable landless labourers than untouchable landless labourers. ಹಿಂದುಳಿದ ವರ್ಗಗಳಿಗೆ ಸೇರಿದಂಥ ಟಚಿಬಲ್ ಲ್ಯಾಂಡ್‌ಲೆಸ್ ಲೇಬರರ್ಸ್ ಸಂಖ್ಯೆಗೆ ಅನ್‌ಟಚಿಬಲ್ ಲ್ಯಾಂಡ್‌ಲೆಸ್ ಲೇಬರರ್ಸ್‌ಗಿಂತ ಹೆಚ್ಚಿಗೆ ಇದೆ. ಆ ಕಾರಣ ಈ distinction ಏನು ಮಾಡಿದ್ದಾರೆ, ಅದು ಸಮಂಜಸವಾಗಿ ಕಾಣುತ್ತಿಲ್ಲ. ಅದನ್ನೇನಾದರೂ ತಿದ್ದುಪಡಿ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ 18 ಪರ್ಸೆಂಟ್ ಟಚ್‌ಬಲ್ಸ್ ಇದ್ದರೆ ಅವರಲ್ಲಿ ಅನ್‌ಟಚ್‌ಬಲ್ಸ್ ಕಡಿಮೆಯಿದ್ದಾರೆ. ಏಕೆಂದರೆ ತಮಗೆ ಗೊತ್ತಿರುವ ಹಾಗೆ ಎಸ್.ಸಿ. ಲಿಸ್ಟ್‌ನಲ್ಲಿಯೂ ಟಚ್‌ಬಲ್ಸ್, ಅನ್‌ಟಚ್‌ಬಲ್ಸ್ ಇದ್ದಾರೆ.

Prof M.D. NANJUNDASWAMY : What is the criteria in making this distinction? ಏಕೆಂದರೆ, ಎಲ್ಲರ ಆರ್ಥಿಕ ಪರಿಸ್ಥಿತಿ ಒಂದೇ ತೆರನಾಗಿದೆ. ಅವರೆಲ್ಲರೂ ಸಮಾನ ದರಿದ್ರಾವಸ್ಥೆಯಲ್ಲಿದ್ದಾರೆ. ಆದ್ದರಿಂದ, ಎಸ್.ಸಿ ಎಸ್.ಟಿಗೆ ಮಾತ್ರ ವಿನಾಯಿತಿ ಕೊಟ್ಟು, ಅದೇ ದುರಾವಸ್ಥೆಯಲ್ಲಿರುವಂತಹ ಬೇರೆ ಸಣ್ಣ ಸಣ್ಣ ಜಾತಿಗಳಿಗೆ ಏಕೆ ವಿನಾಯಿತಿ ಕೊಡಬಾರದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಧ್ಯಕ್ಷಣೆಯವರೇ, ಈಗ ಇದು ಒಂದು ತೀರ್ಮಾನಕ್ಕೆ ಬಂದಿದೆ. ತಮಗೆ ಗೊತ್ತಿರುವ ಹಾಗೆ ಇದು ಹತ್ತಾರು ವರ್ಷಗಳಿಂದ ಬಿದ್ದಿತ್ತು. ಈಗ ಬೇರೆಯವರು ಕೊಡುವ ಹಾಗೆ ಇವರಿಗೆ ಹವಿ ಅಮೌಂಟ್ ಏನಲ್ಲ. ಮ್ಯಾಕ್ಸಿಮಮ್ ಎಂದರೆ ಒಂದು ಎಕರೆಗೆ ನೂರು, ಇನ್ನೂರು, ಮುನ್ನೂರು ರೂಪಾಯಿ ಕೂಡ ಬರುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಜಾಸ್ತಿ ಬರುವುದಿಲ್ಲ. ತಾವು ಹೇಳುವುದರಲ್ಲಿ ಅರ್ಥ ಇದೆ. ನಾನು ಒಪ್ಪಿಕೊಳ್ಳುತ್ತೇನೆ. ಬಡವರಲ್ಲೇ ಏಕೆ distinction ಮಾಡುತ್ತೀರೆಂಬುದು ತಮ್ಮ ವಾದ. ಷೆಡ್ಯೂಲ್ ಕ್ಯಾಸ್ಟ್ ನವರಿಗೆ ಸಂವಿಧಾನದ ಪ್ರಕಾರ ಕೆಲವು ಕನ್‌ಸೇಷನ್ಸ್ ಕೊಡಬೇಕು. ಆ ರೀತಿಯಾಗಿ ಕೊಟ್ಟಿದ್ದೇವೆ. ಈಗ ಇವರಿಗೂ ರಿಯಾಯಿತಿ ಕೊಡಬೇಕೆಂದು ತಾವು ಹೇಳುತ್ತಿದ್ದೀರಿ, ಸದ್ಯಕ್ಕೆ ಪರಿಶೀಲನೆ ಮಾಡಿದ್ದೇವೆ. ಪರಿಶೀಲನೆ ಮಾಡಿದ ನಂತರ ಸ್ವಲ್ಪ ಮಟ್ಟಿಗೆ ಇದರಲ್ಲಿರತಕ್ಕಂಥ ಎನ್‌ಕ್ರೋಚ್‌ಮೆಂಟ್ ಮಾಡಿದಂಥ ಎಸ್‌ಸಿ ಜನ ಬಹಳ ಕಡಿಮೆ ಇದ್ದಾರೆ. ಆ ದೃಷ್ಟಿಯಿಂದ ಸ್ವಲ್ಪ ಫೈನಾನ್‌ಷಿಯಲಿ ರಿಯಾಯಿತಿ ಕೋಡೋಣ ಎಂದು ಎಸ್‌ಸಿಗೆ ಮಾತ್ರ ಇದರಲ್ಲಿ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಬಗರ್ ಹುಕುಂ ಅನ್ನು ಮಂಜೂರು ಮಾಡಿದಂಥ ವಿಚಾರದಲ್ಲಿ ಕಂದಾಯ ಕಾನೂನಿಗೆ ತಿದ್ದುಪಡಿ ತಂದಿದೆ. ಆದರೆ, ಅದಕ್ಕೆ ಫಾರ್ಮುಗಳನ್ನು ಕೊಡುವುದು ತಡವಾಗಿದೆ. ಕಾರಣವೇನೆಂದರೆ, ಸರ್ಕಾರ ನಿಯಮಗಳನ್ನು ಸಕಾಲದಲ್ಲಿ ರಚನೆ ಮಾಡಿರಲಿಲ್ಲ. ಅದು ರಚನೆಯಾಗಲು ಎರಡು ತಿಂಗಳು ಹಿಡಿದಿದೆ. ಆ ಎರಡು ತಿಂಗಳು ಆದ ಮೇಲೆ ಫಾರ್ಮುಗಳು ಒಂದು ತಿಂಗಳು ಈಚೆಗೆ ಬಂದಿದೆ. ಆದರೆ ನಮ್ಮ ಗ್ರಹಚಾರ ಏನೆಂದರೆ, ಪ್ರತಿ ಹಳ್ಳಿ ಹಳ್ಳಿಗೆ ಹೋಗಿ ಈ ಕೆಲಸ ನಡೆಯಬೇಕಾಗಿದೆ. ಮೂರು ತಿಂಗಳಿಲ್ಲಾ ಮಳೆಗಾಲ. ಯಾವ ಊರಿಗೂ ಯಾರು ಹೋಗುವುದಕ್ಕಾಗುವುದಿಲ್ಲ. 17ನೇ ತಾರೀಖು ಕೊನೆಯಾಗುತ್ತದೆ. ಅಷ್ಟರೊಳಗೆ ಎಲ್ಲವನ್ನೂ ಕೊಡುವುದಕ್ಕಾಗುವುದಿಲ್ಲ. ಕನಿಷ್ಟ ಇನ್ನು ಮೂರು ತಿಂಗಳಾದರೂ ಮುಂದಕ್ಕೆ ಹಾಕುವ ಅಗತ್ಯವಿದೆ. ಆದುದರಿಂದ, ಮಾನ್ಯ ಸಚಿವರು ಇದನ್ನು ದಯವಿಟ್ಟು ಪರಿಶೀಲನೆ ಮಾಡಿ ಕಾನೂನಿಗೆ ಸೂಕ್ತ ತಿದ್ದುಪಡಿ ತರುವಂತಹ ವ್ಯವಸ್ಥೆಯನ್ನು ಈ ಅಧಿವೇಶನದಲ್ಲೇ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದಾಗಿ ತಾವು ಏನು ಹೊರಟ್ಟಿದ್ದೀರಿ, ನಿಶ್ಚಿತವಾಗಿ ಇಷ್ಟು ದಿನಾಂಕದೊಳಗೆ, ಆ ಸಾಗುವಳಿ ಚೀಟಿಯನ್ನು ಕೊಡುವುದರ ಬಗ್ಗೆ ಟೈಮ್ ಬೌಂಡ್ ಪ್ರೋಗ್ರಾಂ ಏನಾದರೂ ನಿಶ್ಚಯ ಮಾಡಿದ್ದೀರಾ? ಇದಕ್ಕಾಗಿ ಕೆಲವು ಕಡೆ ಕಮಿಟಿ ಮಾಡಿದ್ದಾರೆ, ಇನ್ನು ಕೆಲವು ಕಡೆ ಕಮಿಟಿ ಮಾಡಿಲ್ಲ. ಅದಕ್ಕೋಸ್ಕರ ಎಲ್ಲ ಕಡೆ ಕಮಿಟಿಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಯಾವ ದಿನಾಂಕದೊಳಗೆ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡಿ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವ ಬಗ್ಗೆ ಸರ್ಕಾರ ನಿಶ್ಚಯ ಮಾಡಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ನಾನು ಹೇಳಿದೆ. ಒಂದು ಡೆಫನೆಟ್ ಡೇಟನ್ನು ನಾವು ಫಿಕ್ಸ್ ಮಾಡಿದ್ದೇವೆ. 17ನೇ ತಾರೀಖಿನೊಳಗೆ ಅಪ್ಲಿಕೇಶನ್ಸ್ ಕಾಲೆಫರ್ ಮಾಡಿದ ಮೇಲೆ ಅಲ್ಲಿಗೆ ಒಂದು ಡೇಟ್ ಕ್ಲೋಸ್ ಆಗುತ್ತದೆ. ಅದಾದ ನಂತರ ಇದ್ದಂಥ ಅಪ್ಲಿಕೇಶನ್ಸ್ ಪ್ರೊಸೆಸ್ ಮಾಡಿ ಕೊಡತಕ್ಕಂಥ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಈಗ ಮಾನ್ಯ ಏಕಾಂತಯ್ಯನವರು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಮಳೆಗಾಲದಲ್ಲಿ ಅನೇಕ ಜನರಿಗೆ ಹೋಗುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇದರಿಂದ ಏನಾಗುತ್ತದೆಂದರೆ, ನಾವು ಒಂದು ಡೆಫನೆಟ್ ಡೇಟ್ ಫಿಕ್ಸ್ ಮಾಡಿ ಡ್ರೈವ್ ತೆಗೆದುಕೊಳ್ಳದೆ ಹೋದರೆ ಈ ಕೆಲಸಗಳು ಅಲ್ಲಿಗೆ ನಿಲ್ಲುತ್ತವೆ ಎನ್ನುವ ದೃಷ್ಟಿಯಿಂದ ನಾವು ಒಂದು ಡೆಫನೆಟ್ ಡೇಟ್ ಕೊಟ್ಟಿದ್ದೇವೆ. ನೀವು ಮೂರು ತಿಂಗಳು ಅಲ್ಲ ಆರು ತಿಂಗಳು ಕೇಳಿದರೂ ಕೊಡುತ್ತೇನೆ. ಈ ಆರು ತಿಂಗಳುವರೆಗೆ ಡಿಸಿಷನ್ ಮತ್ತೆ ಪೋಸ್ಟ್‌ಪೋನ್ ಆಗುತ್ತದೆ.

ಅದಕ್ಕೆ ಕೌಂಟರ್ ಅಪ್ಲಿಕೋಷನ್ ಬರಬಹುದು, ಅಥವಾ ಒಂದೇ ಜಾಗಕ್ಕೆ ಮತ್ತೊಂದು 10 ಮಂದಿ ಕೇಳತಕ್ಕದ್ದು ಬರಬಹುದು, ಮತ್ತೆ ಫಾಲ್ಸ್ ರೆಕಾರ್ಡ್ಸ್ ಹುಟ್ಟಿಸಬಹುದು. ಈಗಾಗಲೇ ಅನೇಕ ಕಡೆ ನಡೆದಿದೆ. ಅದನ್ನು ನಾವು ಮುಚ್ಚು ಮರೆ ಮಾಡಿ, ಸುಮ್ಮನೆ ಏನೂ ಬಂದಿಲ್ಲ ತಪ್ಪಾಗುತ್ತದೆ, ನನಗನ್ನಿಸುತ್ತದೆ, ಒಂದೇ ಜಮೀನಿನ ಮೇಲೆ ಎಷ್ಟು ಅಪ್ಲಿಕೇಷನ್‌ಗಳು ಬರುತ್ತವೋ, ಎಷ್ಟು ಜಗಳಗಳು ಆಗುತ್ತವೋ-ಅದು ಒಂದು ಕಡೆ.

ಶ್ರೀ ಹೆಚ್. ಏಕಾಂತಯ್ಯ: ಎಷ್ಟು ಪ್ರಭಾವಗಳು ಬರುತ್ತವೋ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರಭಾವ ಬಂದರೆ ಅಲ್ಲಿ ನೀವೇ ಇದ್ದೀರಲ್ಲ. ಅದರಲ್ಲಿ ಹೆಚ್ಚೂ ಕಡಿಮೆ ಎಲ್ಲಾ ಎಂಎಲ್‌ಎ.ಗಳು ಇದ್ದಾರೆ. ಅದನ್ನು ನಾನು ಹೇಳುವುದಿಲ್ಲ. ಅದು ನಿಮ್ಮ ನಿಮ್ಮ ವಿವೇಚನೆಗೆ ಬಿಟ್ಟಿದ್ದು, ಯಾವ ರೀತಿ ಬೇಕಾದರೂ ತೀರ್ಮಾನ ತೆಗೆದುಕೊಳ್ಳಬಹುದು. ಅದಕ್ಕೆ ನಾನು ಒಂದು ದಿನಾಂಕವನ್ನು ನಿಗದಿ ಮಾಡಿದ್ದೇನೆ. ಬಹುಶಃ ಅಪ್ಲಿಕೇಷನ್ಸ್ ಬಂದ ಮೇಲೆ ಮುಂದೆ ಬೇಕಾದರೆ ನಾವು ಒಂದು ತಿಂಗಳೂ ಎರಡು ತಿಂಗಳೋ ಎಷ್ಟು ಎಕ್ಸ್‌ಟೆನ್‌ಷನ್ ಮಾಡಬೇಕೋ ಅದನ್ನು ಯೋಚನೆ ಮಾಡೋಣ. ಕಡೇ ಪಕ್ಷ 19ನೇ ತಾರೀಖಿನೊಳಗೆ ನಮಗೆ ಟೋಟಲ್ ಅಪ್ಲಿಕೇಷನ್‌ಗಳ ಸಂಖ್ಯೆಯಾದರೂ ಗೊತ್ತಾಗುತ್ತದೆ. ಅಪ್ಲಿಕೇಷನ್ಸ್ ಒಂದು ಲಕ್ಷ ಬರುತ್ತವೋ, ಎರಡು ಲಕ್ಷ ಬರುತ್ತವೋ ಅಥವಾ ಮೂರು ಲಕ್ಷ ಬರುತ್ತವೋ ನೋಡಿಕೊಂಡು, ನಮ್ಮಲ್ಲಿರತಕ್ಕ ಅಂಕಿಸಂಖ್ಯೆಗಳಿಗೆ ಹೊಂದಾಣಿಕೆ ಇಲ್ಲದಿದ್ದಾಗ ನಾವು ಇನ್ನು 50 ಪರ್‌ಸೆಂಟ್ ಅಪ್ಲಿಕೇಷನ್ಸ್ ಹಾಕಬೇಕಾದವರು ಅಥವಾ ಬೆನಿಫಿಷರೀಸ್ ಕೊಡತಕ್ಕವರು ಇದ್ದರೆ ಅದರ ಅವಶ್ಯಕತೆ ಕಂಡುಬಂದರೆ ಖಂಡಿತವಾಗಿ ಎಕ್ಸ್‌ಟೆಂಡ್ ಮಾಡೋಣ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ 78, ಅದಕ್ಕೆ ಹಿಂದೆ ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಭೂಮಿಯನ್ನು ಖಾಯಂ ಮಾಡಿ ಸಾಗುವಳಿಯು ಚೀಟಿಯನ್ನು ಕೊಡಬೇಕೆಂದು ಸರ್ಕಾರದ ಆಜ್ಞೆ ಇದೆ. ಆ ಆಜ್ಞೆಯ ಪ್ರಕಾರ ಬಂದಂತಹ ಅರ್ಜಿಗಳು ಎಷ್ಟು, ಆದರಲ್ಲಿ ಎಷ್ಟು ವಿಲೇವಾರಿಯಾಗಿದೆ ಆಗ ಖಾಯಂ ಆಗಿದೆ ಉಳಿದಿರತಕ್ಕಂತಹವು ಏನಾದರೂ ಇವೆಯೇ ಹೇಗೆ? ತಮ್ಮಲ್ಲಿ ಇರತಕ್ಕ ಅರ್ಜಿಗಳು ಎಷ್ಟು? ಅವರು ನಾವು ಇಷ್ಟು ದಿವಸ ಮಾಡಿದ್ದೇವೆ, ಟಿ.ಟಿ. ಕೊಟ್ಟಿದ್ದೇವೆ, ನಮಗೆ ಖಾಯಂ ಮಾಡಿಕೊಡಬೇಕೆಂದು ಹೇಳಿರುವ ಬೇಡಿಕೆಗಳು ಎಷ್ಟು ಇವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಜವಾಗಿ ನೋಡಿದರೆ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ನಮ್ಮ ರುದ್ರಪ್ಪನವರು ಕೇಳಿದ ಪ್ರಶ್ನೆ ನೊಮಾಡಿಕ್‌ಗೆ ಸಂಬಂಧಪಟ್ಟಿದ್ದು. 1979ರಲ್ಲಿ ಮತ್ತು 1980ರಲ್ಲಿ ಕೆಲವನ್ನು ರೆಗ್ಯುಲರೈಸೇಷನ್ ಮಾಡಬೇಕು ಎಂದು ಸರ್ಕಾರ ಆಜ್ಞೆ ಹೊರಡಿಸಿತೋ, ಅದನ್ನು ಕಾನೂನಿನ ಪ್ರಕಾರ ಬರೀ ಸರ್ಕಾರದ ಆಜ್ಞೆಯಲ್ಲಿ ಮಾಡತಕ್ಕದಲ್ಲ, ಇದಕ್ಕೆ ಕಾನೂನಿನಲ್ಲಿ ತಿದ್ದುಪಡಿಯನ್ನು ತರಬೇಕು ಎಂದಾಗ ಇವತ್ತು ನಾವು ತಿದ್ದುಪಡಿಯನ್ನು ತಂದಿದ್ದೇವೆ. ಆ ಅಪ್ಲಿಕೇಷನ್‌ಗಳ ಅಂಕಿಸಂಖ್ಯೆಗಳು ಈಗ ನನ್ನ ಬಳಿ ಇಲ್ಲ ಮತ್ತು ಈಗ 17ನೇ ತಾರೀಖು ಕಡೆಯ ದಿನ ಎಂದು ನಾವು ಕೊಟ್ಟಿದ್ದೇವೆ. ಇಷ್ಟರೊಳಗೆ ಎಷ್ಟು ಅಪ್ಲಿಕೇಷನ್‌ಗಳು ಪ್ರತಿಯೊಂದು ತಹಶೀಲ್ದಾರ್‌ರವರ ಕಛೇರಿಗೆ ಬರುತ್ತವೋ ಅದರ ಮೇಲೆ ನಮಗೆ ಗೊತ್ತಾಗುತ್ತದೆ. ಈಗ ನಾವೆಲ್ಲ ರಫ್‌ಲೀ ಸುಮಾರು 12 ಲಕ್ಷ ಎಕರೆ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಅದರಲ್ಲಿ ಕನಿಷ್ಟಪಕ್ಷ 4 ಲಕ್ಷ ಜನ, 3 ಲಕ್ಷದ 75 ಸಾವಿರ ಜನ ಫಲಾನುಭವಿಗಳಿರಬಹುದು ಎನ್ನತಕ್ಕ ಅಂದಾಜು ಮಾಡಲಾಗಿದೆ. ಡೆಫನ್‌ಟ್ಯಾಗಿ ಅಂಕಿಸಂಖ್ಯೆಗಳು ಬಹುಶಃ 19ನೇ ತಾರೀಖು ನಮಗೆ ಸಿಗುತ್ತವೆ.

ಶ್ರೀ ಎಸ್. ರುದ್ರಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಅಲೆಮಾರಿ ಜನರು ಖಾಯಂ ಆಗಿ ವಾಸವಿಲ್ಲವೆಂದು ಹೇಳಿದ್ದಾರೆ, ಅಂದಮೇಲೆ ಯಾವರೀತಿ ಅವರನ್ನು ಗುರುತಿಸಿ ಅವರಿಗೆ ಜಮೀನನ್ನು ಕೊಡುತ್ತೀರಿ, ಅವರಿಗೆ ನಿವೇಶನ ಕೊಡುತ್ತೀರಿ ಎಂದು ಸಚಿವರನ್ನು ಕೇಳುತ್ತೇನೆ.

ಉಪಾಧ್ಯಕ್ಷರು: ಅಲೆಮಾರಿ ಎಂದರೆ...

ಶ್ರೀ ಎಸ್. ರುದ್ರಪ್ಪ : ಅಲೆಮಾರಿ ಜನರು ಖಾಯಂ ನಿವಾಸಿಗಳಲ್ಲವೆಂದು ಹೇಳಿದ್ದಾರೆ. ಅವರಿಗೆ ಜಮೀನು ಕೊಡಬೇಕಾದರೆ, ಅವರಿಗೆ ನಿವೇಶನ ಕೊಡಬೇಕಾದರೆ, ಯಾವ ರೀತಿ ಅವರನ್ನು ಗುರುತಿಸಿ, ಸರ್ಕಾರದವರು ಅವರಿಗೆ ಯಾವ ರೀತಿ ಸವಲತ್ತುಗಳನ್ನು ಕೊಡುತ್ತಾರೆ ಎಂದು ಸಚಿವರನ್ನು ಕೇಳುತ್ತೇನೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾವು ಹೇಳುವುದೇನೆಂದರೆ, ನೊ ಮ್ಯಾಡಿಕ್‌ಟ್ರೈಬ್ಸ್‌ನವರು ಎಲ್ಲಾದರೂ ಒಂದು ಕಡೆ ಸೆಟಲ್ ಆಗಿ ಎನ್‌ಕ್ರೋಚ್ ಮಾಡಿದರೆ ಅವರಿಗೂ ಕೂಡ ಕಾನೂನಿನ ಪ್ರಕಾರ ರೆಗ್ಯುಲರೈಸ್ ಮಾಡಿ ಕೊಡುತ್ತೇವೆ. ಅಥವಾ ಅವರು ಯಾವುದಾದರೂ ಒಂದು ಕಡೆ ಖಾಯಂ ಆಗಿ ಉಳಿದುಕೊಂಡು, ಸೈಟ್ಸ್‌ನ್ನು ಕೇಳಿದರೆ, ಬೇರೆಯವರಿಗೆ ಯಾವ ರೀತಿ ಹಂಚುತ್ತೇವೋ ಅದೇ ರೀತಿ ಅವರಿಗೂ ಹಂಚುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ ೨೪೪೪ ಆರ್‌ಡಿಪಿಆರ್‌ಗೆ ವರ್ಗಾವಣೆಯಾಗಿದೆ ಏಕೆಂದರೆ ನಿವೇಶನದ ಹಂಚಿಕೆಯ ವಿಷಯವು ರೂರಲ್ ಡೆವಲಪ್‌ಮೆಂಟ್‌ಗೆ ಸೇರುತ್ತದೆ.

ಉಪಾಧ್ಯಕ್ಷರು: ಮುಂದೆ ತಮಗೆ ಪ್ರಶ್ನೆಯನ್ನು ಹಾಕಲು ಅವಕಾಶ ಕೊಡುತ್ತೇನೆ.

ರಾಜ್ಯದಲ್ಲಿ ರೈತರ ಹಿತದೃಷ್ಟಿಯಿಂದ ಕೋಳಿ ಮೊಟ್ಟೆ ಮಂಡಳಿ ಸ್ಥಾಪನೆ

೨೫೩೩. ಶ್ರೀ ಕೆ.ಹೆಚ್. ಹನುಮೇಗೌಡರು (ಹಾಸನ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೋಳಿ ಸಾಕಾಣಿಕೆಯು ರೈತರ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ 'ಎಗ್' ಬೋರ್ಡ್ (ಎಗ್)ನ್ನು ಸ್ಥಾಪಿಸಲು ಆಲೋಚಿಸಿದೆಯೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು)

ಅ) ಇಲ್ಲ ಆದರೆ ಒಂದು ಕೋಳಿ ಮಾರಾಟ ನಿಗಮವನ್ನು ಸ್ಥಾಪಿಸುವ, ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಸನ್ಮಾನ್ಯ ಉಪಾಧ್ಯಕ್ಷರೇ, ಹಿಂದೆ ಈ ಸದನದಲ್ಲಿ ಹಿಂದಿನ ಪಶುಸಂಗೋಪನಾ ಇಲಾಖೆಯ ಮಂತ್ರಿಗಳು ಎಗ್ ಬೋರ್ಡ್‌ನ್ನು ಪ್ರಾರಂಭಿಸುತ್ತೇವೆಂದು ಎರಡು ಮೂರು ಸಾರಿ ಹೇಳಿದ್ದರು. ಆದರೆ ಇದುವರೆಗೂ ಏಕೆ ಪ್ರಾರಂಭವಾಗಲಿಲ್ಲ ಎಂದು ನಾನು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಕೋಳಿ ಮಾರಾಟ ನಿಗಮವನ್ನು ಸ್ಥಾಪಿಸುವುದು ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದಾರೆ. ಕೋಳಿ ಮಾರಾಟ ನಿಗಮವನ್ನು ಮಾಡಬೇಕು ಎಂದು ಹೇಳಿದರಲ್ಲಾ ಇದರ ರೂಪರೇಖೆಗಳು ಏನು? ಮೊದಲು ಕೋಳಿ ಮೊಟ್ಟೆ ಬೋರ್ಡ್ ಮಾಡುತ್ತೇವೆಂದು ಹೇಳಿದ್ದರಲ್ಲಾ ಅದನ್ನು ಬಿಟ್ಟು ಇದನ್ನು ಮಾಡುವುದಕ್ಕೆ ಏನು ಕಾರಣ? ಇದರ ವ್ಯತ್ಯಾಸವೇನು? ಇದರ ರೂಪುರೇಶೆಗಳನ್ನು ಸ್ವಲ್ಪ ದಯವಿಟ್ಟು ತಿಳಿಸಿ.

ಶ್ರೀ ಬಸವರಾಜ್ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹಿಂದಿರತಕ್ಕಂಥ ಮಂತ್ರಿಗಳು ಎಗ್ ಬೋರ್ಡ್ ಮಾಡುತ್ತೇವೆಂದು ಹೇಳಿದ್ದರು ಎಂದು ಹೇಳಿದರು. ಅದು ನಮ್ಮ ಗಮನದಲ್ಲಿ ಬಂದಿಲ್ಲ. ಈಗ ಸದ್ಯಕ್ಕೆ ಎಗ್ ಬೋರ್ಡ ಮಾಡುವ ವಿಚಾರವಿಲ್ಲವೆಂದು ನಾನು ಹೇಳಿದ್ದೇನೆ. ಒಂದು ಕೋಳಿ ಮಾರಾಟ ನಿಗಮವನ್ನು ಸ್ಥಾಪಿಸುವ ವಿಷಯ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೇನೆ. ಅದರ ಉದ್ದೇಶಗಳನ್ನು ಹೇಳುತ್ತೇನೆ.